ಅಸಲು ದಾವಾ ನಂಃ 1/2015 ಪಿ.ಡಬ್ಲ್ಯೂಃ 01

ಸಾಕ್ಷಿಗೆ ದಿಃ 11.02.2019 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟಿ ಸವಾಲು ಎದುರುದಾರರ ಪರ ಶ್ರೀ ಹೆಚ್.ಬಿ.ಐ., ವಕೀಲರಿಂದಃ

ಆರ್ ಸಿ ಪಾಟೀಲ್ ಬಂಗಾರಪ್ಪನ ವಿರುದ್ಧ ಸ್ಪರ್ಧಿಸಿ ಸೋತರು ಎಂದರೆ ಸರಿ. ನಮ್ಮ ತಂದೆ ಬಿಎ ಓದಿದ್ದರು. ಮಾಜಿ ಎಂ ಎಲ್ ಎ ಲಕ್ಷ್ಮೀಕಾಂತಪ್ಪ ಕೂಡ ಪದವೀಧರರಾಗಿದ್ದರು. ನಮ್ಮ ತಂದೆ ತಾಲ್ಲೂಕು ಬೋರ್ಡ್ ಮೆಂಬರ್ ಆಗಿದ್ದರು ಎಂದರೆ ಸರಿ. ಆಗಿನ ಕಾಲಕ್ಕೆ ನನ್ನ ತಂದೆ ಬಹಳ ಬುದ್ಧಿವಂತರಾಗಿದ್ದ ಕಾರಣ ತಾಲ್ಲೂಕು ಬೋರ್ಡಿನ ಅಧ್ಯಕ್ಷರಾಗಿದ್ದರು ಎಂದರೆ ಸರಿ. ಸುಮಾರು 40 ವರ್ಷ ನಮ್ಮ ತಂದೆ ಕಾಂಗ್ರೆಸ್ ನ ಮುಖಂಡರಾಗಿದ್ದರು ಎಂದರೆ ಸರಿ. ವಂಶವೃಕ್ಷವನ್ನು ತಾಯಿಯ ತಂದೆ ಹೇಳಿದ ಆಧಾರದ ಮೇಲೆ ಬರೆಸಿರುತ್ತೇವೆ. ನನ್ನ ತಾಯಿಯ ತಂದೆ ಜೀವಂತ ಇಲ್ಲ. ಅವರು ಮಾಹಿತಿಯನ್ನು ನಮ್ಮ ತಾಯಿಗೆ ಹೇಳಿದ್ದರು. ವಂಶವೃಕ್ಷವನ್ನು ಸಾಬೀತುಪಡಿಸಲು ದಾಖಲೆಗಳು ಇರುವುದಿಲ್ಲ. ವಂಶವೃಕ್ಷವನ್ನು ನಿಜ ಎಂದು ತಿಳಿಸಲು ನಮ್ಮ ಊರಿನಲ್ಲಿ ಹಿರಿಯರು ಪಕೀರಣ್ಣ ಇದ್ದರು. ಆದರೆ ಅವರು ಈಗ ಮರಣ ಹೊಂದಿರುತ್ತಾರೆ. ಪಕೀರಣ್ಣ ಕೂಡ ವಿಷಯವನ್ನು ನಮ್ಮ ತಾಯಿಗೆ ತಿಳಿಸಿರುತ್ತಾರೆ. ಸಾಕ್ಷಿ ನುಡಿಯಲು ನನಗೆ ನನ್ನ ತಾಯಿ ಅಧಿಕಾರ ಪತ್ರ ಬರೆದುಕೊಟ್ಟಿಲ್ಲ. ನಮ್ಮ ತಾಯಿ ಪ್ರತಿವಾದ ಪತ್ರದಲ್ಲಿ ನಮ್ಮ ವಂಶವೃಕ್ಷ ಸರಿ ಇದೆ ಒಂದು ಒಪ್ಪಿಕೊಂಡಿರುತ್ತಾರೆ. ನಮ್ಮ ತಾಯಿಯ ತಂದೆ ವಂಶವೃಕ್ಷವನ್ನು ಹೇಳಿ ಬರೆಸಿದ್ದಾರೆ. ನನ್ನ ತಾಯಿಯ ತಂದೆ ಶಿವನಗೌಡ ಪಾಟೀಲ್. ಶಿವನಗೌಡ ಪಾಟೀಲ್ ರವರ ವಂಶವೃಕ್ಷ ಬರೆಸಿದ್ದ ಬಗ್ಗೆ ದಾಖಲೆ ಇಲ್ಲ. ಶಿವನಗೌಡ ಪಾಟೀಲ್ 10 ವರ್ಷದ ಹಿಂದೆ ಮರಣ ಹೊಂದಿರುತ್ತಾರೆ. ನಮ್ಮ ವಂಶವೃಕ್ಷಕ್ಕೆ ಶಿವನಗೌಡ ಪಾಟೀಲರು ಸಹಿ ಮಾಡಿಲ್ಲ. ಅವರು ಬರೆಸಿದ ವಂಶವೃಕ್ಷವನ್ನು ನಮ್ಮ ತಾಯಿ ಕಡೆಗೆ ಕೊಟ್ಟಿದ್ದರು. ನನ್ನ ತಾಯಿಗೆ ಕೊಟ್ಟ ವಂಶವೃಕ್ಷ ಈಗಲೂ ನಮ್ಮ ಮನೆಯಲ್ಲಿ ಇದೆ. ನನ್ನ ತಾಯಿ ಬಳಿ ಇದೆ. ದಾವಾ ಹೂಡುವ ಪೂರ್ವದಲ್ಲಿ ನನ್ನ ತಾಯಿಯನ್ನು ನಾನು ಜಯಣ್ಣ ವಕೀಲರ ಬಳಿ ಕರೆದುಕೊಂಡು ಹೋಗಿದ್ದೆ. ಆಗ ನನ್ನ ಅಜ್ಜ ಬರೆಸಿದ್ದ ವಂಶವೃಕ್ಷವನ್ನು ಜಯಣ್ಣ ವಕೀಲರಿಗೆ ಕೊಟ್ಟಿದ್ದೆ ಆದರೆ ಅವರು ನ್ಯಾಕ್ಕೆ ಹಾಜರುಪಡಿಸಿಲ್ಲ. ವಂಶವೃಕ್ಷವನ್ನು ಹಾಜರುಪಡಿಸಿದ್ದೇವೆ ಎಂದು ದಾವಾದಲ್ಲಿ ಹೇಳಿದ್ದೆ ಎಂದರೆ ಸರಿ. ವಾದ ಪತ್ರಕ್ಕೆ ನಾನು ಸಹಿ ಮಾಡುವಾಗ ನಾನು ಹಾಜರುಪಡಿಸಿದ್ದ ವಂಶವೃಕ್ಷ ಅದರಲ್ಲಿ ಇರಲಿಲ್ಲ. ಆಗ ನಾನು ಜಯಣ್ಣ ವಕೀಲರಿಗೆ ಪ್ರಶ್ನೆ ಮಾಡಿದೆ. ಆಗ ಅವರು ನ್ಯಾಕ್ಕೆ ಕೊಟ್ಟಿದ್ದೇನೆ ಎಂದು ತಿಳಿಸಿರುತ್ತಾರೆ. ವಂಶವೃಕ್ಷ ಸರಿಯಾಗಿ ಕೊಟ್ಟಿಲ್ಲ ಎಂದು ಪ್ರಕರಣದ ಕಡತವನ್ನು ನಾನು ಈಶ್ವರಪ್ಪ ನಾಯಕ್ ವಕೀಲರಿಗೆ ಕೊಟ್ಟಿದ್ದೇನೆ ಎಂದರೆ ಸರಿ. ನನ್ನ ಅಜ್ಜ 2 ವಂಶವೃಕ್ಷವನ್ನು ಬರೆಸಿದ್ದು, ಅದರಲ್ಲಿ ಒಂದು

ಮನೆಯಲ್ಲಿಯೇ ಇತ್ತು ಅದನ್ನು ನೋಡಿ ಪುನಃ ವಂಶವೃಕ್ಷವನ್ನು ಬರೆಸಿದ್ದೇನೆ. ನಮ್ಮ ಮುತ್ತಜ್ಜನ ಕಾಲದಲ್ಲಿ ವಂಶವೃಕ್ಷ ಬರೆಸಲಾಗಿತ್ತು. ನಮ್ಮ ಮನೆಯಲ್ಲಿ ನಮ್ಮ ಅಜ್ಜ ಬರೆಸಿದ ವಂಶವೃಕ್ಷ ಇದ್ದು, ಅದನ್ನು ನ್ಯಾಕ್ಕೆ ಹಾಜರುಪಡಿಸಲು ಪ್ರಯತ್ನಿಸಿದ್ದೀರಿಯೇ ಎಂದರೆ ಅದು ಮನೆಯಲ್ಲಿಯೇ ಇದೆ. ಉಪ ತಹಸೀಲ್ದಾರರವರಿಗೆ ಮನೆಯಲ್ಲಿದ್ದ ಮೂಲ ವಂಶವೃಕ್ಷವನ್ನು ತೋರಿಸಿ ತಾಳೆ ಮಾಡಿಸಿಲ್ಲ. ನಿಪಿ 44 ವಂಶವೃಕ್ಷವನ್ನು ಯಾವ ದಾಖಲೆಯನ್ನು ಆಧರಿಸಿ ಬರೆದಿದ್ದಾರೆ ಎಂದರೆ ನಮ್ಮ ಅಜ್ಜಿಯ ತಂದೆಯ ತಂದೆ ಚನ್ನಪ್ಪಗೌಡ ಕೊಟ್ಟ ವಂಶವೃಕ್ಷ ಆಧರಿಸಿ ಬರೆದಿದ್ದಾರೆ. ಸದರಿ ವಂಶವೃಕ್ಷವನ್ನು ನಮ್ಮ ಅಜ್ಜ ಬರೆದಿದ್ದೊ, ಅಧಿಕಾರಿಗಳು ಬರೆದಿದ್ದೋ ಎಂದು ಹೇಳಲಾಗುವುದಿಲ್ಲ ಎಂದರೆ ಸರಿ. ನಿಪಿ 44 ವಂಶವೃಕ್ಷ ಬರೆಸಲು ಯಾವುದೇ ಆಧಾರ ಇಲ್ಲ ಎಂದರೆ ಸರಿಯಲ್ಲ.

(ಮುಂದುವರಿದ ಪಾಟಿ ಸವಾಲಿಗೆ ಸಮಯ ಕೋರಿದ್ದು ಕಲ್ಪಿಸಲಾಗಿದೆ)
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)
ನನ್ನ ಸಮಕ್ಷಮ

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತೇನೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂಡಾಧಿಕಾರಿಗಳು, ಸೊರಬ.